Online Newspaper Clipping Service
Dtd- Wednesday, 22nd, January- 2020

ಉದಯವಾಣಿ

Page No.05

# ದೇವರಾಜ ಅರಸು ಕಾಲೇಜು ಘಟಿಕೋತ್ಸವ

**ಕೋಲಾರ:** ದೇವರಾಜ ಅರಸು ಶುಶ್ರೂಷ ಶಾಲೆ ಮತ್ತು ಮಹಾವಿದ್ಯಾಲಯ ತನ್ನ ಬೆಳ್ಳಿಹಬ್ಬ ಹಾಗೂ ಘಟಿಕೋತ್ಸವ ಸಮಾರಂಭ ನಡೆಯಿತು.

ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಡಾ.ಜೀನತ್ ಮಾಡಿದರು. ಪ್ರಾಂಶುಪಾಲೆ ಡಾ.ವಿಜಯಲಕ್ಷ್ಮೀ ವಿದ್ಯಾಲಯದ ವಾರ್ಷಿಕ ವರದಿ ಮಂಡಿಸಿದರು. ನಂತರ ಹೊಸದಾಗಿ ದಾಖಲಾದ ವಿದ್ಯಾರ್ಥಿಗಳು ದೀಪದೊಂದಿಗೆ ಪ್ರಮಾಣ ವಚನ ಸ್ವೀಕರಿಸಿದರು. ಇದನ್ನು ಪ್ರೊ.ಮೇರಿ ಮಿನರ್ವ ಬೋಧಿಸಿದರು.

ಘಟಿಕೋತ್ಸವದಲ್ಲಿ ಪಾಲ್ಗೊಂಡ ಎಲ್ಲಾ ಪದವೀಧರರಿಗೆ ಪ್ರೊ.ಲಕ್ಷ್ಮೀದೇವಿ ಮತ್ತು ದೇವರಾಜ ಅರಸು ವಿಶ್ವ ವಿದ್ಯಾಲಯದ ಉಪಕುಲಪತಿ ಡಾ.ಪ್ರದೀಪ್ ಕುಮಾರ್ ಪದವಿ ಪ್ರದಾನ ಮಾಡಿದರು.

ಪ್ರೊ.ಲಕ್ಷ್ಮೀದೇವಿ ಮಾತನಾಡಿ, ಹೊಸದಾಗಿ ಸೇರ್ಪಡೆಯಾದ ವಿದ್ಯಾರ್ಥಿಗಳು ರೋಗಿಗಳಲ್ಲಿ ಸಂಯಮ ಮತ್ತು ಪ್ರೀತಿಯಿಂದ ಶುಶ್ರೂಷ ಮಾಡಬೇಕೆಂದು ಕಿವಿಮಾತು ಹೇಳಿದರು. ಪದವೀಧರರು, ಶುಶ್ರೂಷಕರು ವೈದ್ಯರಿಗಿಂತ ಹೆಚ್ಚು ಸಮಯ ರೋಗಿಯೊಂದಿಗೆ ಇರುವುದರಿಂದ ರೋಗಿಯ ಆರೋಗ್ಯ ಚೇತರಿಸಿಕೊಳ್ಳುತ್ತದೆ. ಈ ಕಾರಣ ಶುಶ್ರೂಷಕರು ದೇವಕನ್ಯಯರೆಂದರು.

ವಿಶ್ವವಿದ್ಯಾಲಯದ ನಿರ್ದೇಶಕ ರಾಜೇಂದ್ರ ಮಾತನಾಡಿ, ಈ ಸಂಸ್ಥೆಯು 25 ವರ್ಷದಿಂದ 1500 ಶುಶ್ರೂಷಕರನ್ನು ನಮ್ಮ ಸಮಾಜಕ್ಕೆ ನೀಡಿದೆ. ನಮ್ಮ ಸಂಸ್ಥೆಯು ರಾಜ್ಯದ ಉತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ. ಇದರ ಗುರಿ ಸಮಾಜಕ್ಕೆ ಉತ್ತಮ ಶಿಕ್ಷಣ ಕೊಡುವುದಾಗಿದೆ. ಜಿಲ್ಲೆಯ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡರೆ ಇನ್ನೂ ಉತ್ತಮವೆನಿಸುತ್ತದೆ ಎಂದರು.

ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಯ್ಯ ಮಾತನಾಡಿ, ನಮ್ಮ ವಿಶ್ವವಿದ್ಯಾಲಯವು ಉತ್ತಮ ಶಿಕ್ಷಣ ನೀಡುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿ ಉನ್ನತ ಸ್ಥಾನವನ್ನು ಅಲಂಕರಿಸುವಂತೆ ಶುಭ ಹಾರೈಸಿದರು. ಕಾರ್ಯದರ್ಶಿ ಜಿ.ಎಚ್.ನಾಗರಾಜ ಹೆಚ್ಚು ಅಂಕಗಳಿಸಿರುವವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಡಾ.ಎಂ.ಎಸ್.ರಾಧಾ ವಂದಿಸಿದರು.



ಕೋಲಾರದ ದೇವರಾಜ ಅರಸು ಶುಶ್ರೂಷ ಶಾಲೆ ಮತ್ತು ಮಹಾವಿದ್ಯಾಲಯದ ಬೆಳ್ಳಿ ಹಬ್ಬ ಹಾಗೂ ಘಟಿಕೋತ್ಸವ ಸಮಾರಂಭವನ್ನು ಉಪಕುಲಪತಿ ಡಾ.ಪ್ರದೀಪ್‌ಕುಮಾರ್ ಉದ್ಘಾಟಿಸಿದರು.